

ಒಂದರಂತೆ ಏಳು ಕಲ್ಲುಗಳನ್ನು ಜೋಡಿಸಿಟ್ಟಳು. ಆಟ ಪ್ರಾರಂಭವಾಯಿತು. ಅನ್ನಪೂರ್ಣ ಗುರಿ ಇಟ್ಟು ಹುಡುಗರಿಗೆ ಚೆಂಡಿನಿಂದ ಹೊಡೆದು ಔಟ್ ಮಾಡಿದಳು. ತಮ್ಮ ಸರದಿ ಬಂದಾಗ ಬೇಗ ಕಲ್ಲುಗಳನ್ನು ಜೋಡಿಸಿ ಲಗೋರಿ ಮಾಡಿದಳು.

ತಾವು ಸೋಲುತ್ತಿರುವುದನ್ನು ನೋಡಿ ದೇವಾಂಗ್ "ಈಗ ಟೀಮ್ ಬದಲಾಯಿಸೋಣ; ಅನ್ನಪೂರ್ಣ ನನ್ನ ಟೀಮ್. ಇವನು ಬಹಳ ಸ್ಟ್ರಾಂಗ್. ಇವನು ನಿಮ್ಮ ಟೀಮ್" ಎಂದು ಬದಲಾವಣೆ ಸೂಚಿಸಿದ. ಇಬ್ಬರು ಹುಡುಗಿಯರು ಮೊದಲು ಒಪ್ಪಲಿಲ್ಲ. ಆದರೆ ಚೆಂಡು ದೇವಾಂಗ್ ತಂದಿದ್ದ. ಹಾಗಾಗಿ ಒಪ್ಪಿಕೊಳ್ಳಲೇಬೇಕಾಗಿತ್ತು. ಅನ್ನಪೂರ್ಣ ಬೇಸರದಿಂದ ಅತ್ತ ಹೋದಳು. ಹೊಸ ತಂಡಗಳ ಆಟ ಪ್ರಾರಂಭವಾಯಿತು.

ಈ ತಂಡದಲ್ಲಿ ಈಗ ಅನ್ನಪೂರ್ಣ ಆಡುತ್ತಿದ್ದ ಆಟ ನೋಡಿ ನಿರ್ಮಲಳಿಗೆ ಆಶ್ಚರ್ಯವಾಯಿತು. ಅವಳು ಎದುರಾಳಿ ತಂಡದ ಹುಡುಗಿಯರಿಗೆ ತಾಗದಂತೆ ಚೆಂಡನ್ನು ಎಸೆಯ ತೊಡಗಿದಳು. ಅದು ಆ ಇಬ್ಬರು ಹುಡುಗಿಯರಿಗೂ ಗೊತ್ತಾಯಿತು. ನಿರ್ಮಲಳು 'ಪರವಾಗಿಲ್ಲವೇ, ಈ ಚೋಟುದ್ದ ಹುಡುಗಿ, ತನ್ನನ್ನು ಆಟಕ್ಕೆ ಸೇರಿಸಿಕೊಂಡ ಹುಡುಗಿಯರಿಗೆ ನಿಯತ್ತಾಗಿ ಆಡುತ್ತಿದ್ದಾಳೆ' ಎಂದುಕೊಂಡಳು. ಆಟದ ಕೊನೆಗೆ ಅವಳ ಹೆಸರು ಪೂರ್ಣಿಯಾಗಿಹೋಗಿತ್ತು.

ಆಟ ಮುಗಿದಾಗ ನಿರ್ಮಲ ಅನ್ನಪೂರ್ಣಳನ್ನು ಕರೆದು ವಿಚಾರಿಸಿದಳು. "ನೀನು ಯಾವ ತರಗತಿಯಲ್ಲಿ ಓದ್ತಾ ಇದ್ದೀಯ?"

"ನಾನು ಶಾಲೆಗೆ ಹೋಗ್ತಿಲ್ರಿ ಮೇಡಂ. ಮೊದಲು ವಿದ್ಯಾರಣ್ಯಪುರದಲ್ಲಿ ಒಂದೂವರೆ ವರ್ಷ ಇದ್ದಿವಿ. ಅಲ್ಲೇ ಪಕ್ಕದಲ್ಲಿದ್ದ ಶಾಲಿನಿ ಮೇಡಂ ನನಗೆ ಪ್ರತಿದಿನ ಅವರ ಮನೆಯಲ್ಲೇ ಪಾಠ ಹೇಳಿಕೊಡುತ್ತಿದ್ದರು."

"ಹೌದಾ! ಹಾಗಾದ್ರೆ ಏನೇನು ಕಲಿಸಿದಾರೆ ಅವರು?"

"ಅ ಆ ಇ ಈಯಿಂದ ಪ್ರಾರಂಭಿಸಿ, ಒಂದರಿಂದ ನಾಲ್ಕನೇ ತರಗತಿವರೆಗೆ ಅವರೇ ಪುಸ್ತಕ ತಂದು ಕೊಟ್ಟು ಕಲಿಸಿದ್ದರು. ಕನ್ನಡದಲ್ಲಿ ವಾಕ್ಯಗಳು ಬರೆಯುವುದು, ಕೂಡುವುದು, ಕಳೆಯುವುದು, ಜೊತೆಗೆ ಏಳರವರೆಗೆ ಮಗ್ಗಿ ಬಾಯಿಪಾಠ ಮಾಡಿಸಿದ್ದರು" ಎಂದಾಗ ನಿರ್ಮಲಳಿಗೆ ಆಶ್ಚರ್ಯವಾಗಿತ್ತು.

"ಮತ್ತೆ ಇಂಗ್ಲಿಷ್?"

"ಅವರೇ ಎಬಿಸಿಡಿ ಕಲಿಸ್ತಾ ಇದ್ರು, ಸಣ್ಣ ಪ್ರಶ್ನೆ–ಉತ್ತರ ಹೇಳಿಕೊಟ್ಟು, ಇಂಗ್ಲಿಷಿನಲ್ಲಿ ಮಾತನಾಡಲು ಕಲಿಸಿದ್ರು. ನಿಮ್ಮಂತ ಲೇಡೀಸ್ಗೆ 'ಮೇಡಂ' ಅನ್ನಬೇಕು, ಗಂಡಸರಿಗೆ 'ಸರ್' ಅನ್ನಬೇಕು ಅಂತ ಹೇಳಿ ಕೊಟ್ಟಿದ್ರು."

ಅನ್ನಪೂರ್ಣಳ ಮಾತು ಕೇಳಿ, ಅವಳು ತನ್ನನ್ನು ಮೊದಲಿಂದಲೂ 'ಮೇಡಂ' ಎಂದೇ ಸಂಬೋಧಿಸುತ್ತಿರುವುದು ನೆನಪಾಯಿತು.

"ಮತ್ತೆ ಈಗ?"

"ಅಲ್ಲಿ ವಾಚ್‌ಮನ್ ಕೆಲಸ ಮುಗಿದು ಈಗ ಸಾರಕ್ಕಿ ಹತ್ತಿರ ಮನೆ ಕಟ್ಟುತ್ತಿದ್ದಾರೆ. ಅಲ್ಲಿಗೆ ಬಂದುಬಿಟ್ಟೆವು. ಶಾಲಿನಿ ಮೇಡಂ ಆ ಎಲ್ಲಾ ಪುಸ್ತಕ ನನಗೆ ಕೊಟ್ಟುಬಿಟ್ಟಿದ್ದಾರೆ. 'ಪ್ರತಿದಿನ ಓದಿ ಬರೆದು ಮಾಡ್ತಾ ಇರು; ನನ್ನ ತರಹ ಇನ್ಯಾರಾದರೂ ಸಿಕ್ತಾರೆ. ಅವರಿಂದ ಐದನೇ ತರಗತಿಯಿಂದ ಮುಂದಕ್ಕೆ ಕಲಿ' ಅಂತ ಹೇಳಿದ್ದರು. ಅಲ್ಲಿಂದ ಬರೋವಾಗ ನನಗೆ ಐವತ್ತು ರೂಪಾಯಿ, ಈ ಲಂಗ ಬಹುಮಾನ ಕೊಟ್ಟಿದ್ರು ಮೇಡಂ" ಎಂದು ಹೇಳುವಾಗ ಅನ್ನಪೂರ್ಣಳ ಕಂಠ ತುಂಬಿ ಬಂದಿತ್ತು.

"ನಿಂಗೆ ಓದೋಕ್ಕೆ ಅಷ್ಟು ಇಷ್ಟಾನೇನೆ?"

"ಹೂಂನ್ರೀ ಮೇಡಂ. ನಾನು ಹತ್ತನೇ ತರಗತಿವರೆಗೂ ಓದಲೇಬೇಕು" ಎನ್ನುವಾಗ ಅವಳ ಕಣ್ಣುಗಳಲ್ಲಿ ನಿರ್ಧಾರದ ಹೊಳಪು ಎದ್ದುಕಾಣುತ್ತಿತ್ತು.

ಹೀಗೆ ನಿರ್ಮಲಳಿಗೆ ಅಂದು ಬೆಳಿಗ್ಗೆ ತಾನೇ ಅನ್ನಪೂರ್ಣಳ ಪರಿಚಯ ಆಗಿತ್ತು.

ನಿರ್ಮಲಳಿಗೆ ಶಾಲಿನಿ ಮೇಡಂ ಮಾಡಿದ ಕೆಲಸ ಬಹಳ ಹಿಡಿಸಿಬಿಟ್ಟಿತ್ತು. 'ಅರೇ, ಮನೆಯಲ್ಲೇ ಇರುವ ತಾನು ಕೂಡ ಈ ರೀತಿ ಮಾಡಿದರೆ, ಕಲಿಯಲು ಸಾಧ್ಯವಾಗದ ಒಂದಷ್ಟು ಹುಡುಗರಿಗೆ ಸ್ವಲ್ಪವಾದರೂ ಸಹಾಯವಾಗುತ್ತದೆ' ಎನ್ನಿಸಿಬಿಟ್ಟಿತ್ತು. ಅನ್ನಪೂರ್ಣ ಹೇಳಿದ್ದ 'ಇನ್ಯಾರಾದರು ಸಿಕ್ಕಿ, ಐದನೇ ತರಗತಿಯಿಂದ ಪಾಠ ಕಲಿಸುತ್ತಾರೆ' ಅನ್ನುವ ಮಾತುಗಳು ನಿರ್ಮಲಳ ಮನದಲ್ಲಿ ಅನುರಣಿತವಾಗುತ್ತಿದ್ದವು. ಅವಳಿಗೆ ಶಾಲಿನಿ ಮೇಡಂ ಆ ಮಾತುಗಳನ್ನು ತನ್ನನ್ನು ಕುರಿತೇ ಹೇಳಿದ್ದು ಎನ್ನಿಸತೊಡಗಿತ್ತು.

ಈ ಎಲ್ಲ ವಿಚಾರಗಳನ್ನು ತನ್ನ ಗಂಡನೊಡನೆ ಹಂಚಿಕೊಂಡಳು. ಅವನು ಮೊದಲು ನಿರುತ್ಸಾಹ ತೋರಿಸಿದ. ಆದರೆ ಅನ್ನಪೂರ್ಣಳ ಕಲಿಯುವ ಆಸೆ, ಸಾಮರ್ಥ್ಯದ ಬಗ್ಗೆ ನಿರ್ಮಲ ಒತ್ತಿಒತ್ತಿ ಹೇಳಿದಾಗ ಯೋಚಿಸತೊಡಗಿದ. ಅವನ ಯೋಚನೆಗೆ ಕಾರಣ ಬೇರೆಯೇ ಇತ್ತು. ಕಳೆದ ನಾಲ್ಕೈದು ತಿಂಗಳುಗಳಿಂದ ನಿರ್ಮಲಳು ಯಾವುದರಲ್ಲೂ ಆಸಕ್ತಿ ತೋರಿಸುತ್ತಿರಲಿಲ್ಲ, ಆಗಾಗ ಅವಳಿಗೆ ಮರೆವು ಇಣುಕುತ್ತಿದೆ ಎನ್ನಿಸುತ್ತಿತ್ತು. ಹಾಗಾಗಿ ಅವನಿಗೆ ಅನ್ನಪೂರ್ಣಳಿಗೆ ಕಲಿಸುವುದರಲ್ಲಿ ಆಸಕ್ತಿ ಇದೆ ಎಂದಾದರೆ ನಿರ್ಮಲಳು ಅದರಲ್ಲಿ ತೊಡಗಿಸಿಕೊಳ್ಳುವುದು ಒಳ್ಳೆಯದು ಎನ್ನಿಸಿತು.

"ಆ ಹುಡುಗಿಗೆ ಓದಿ ಬರೆದು ಮಾಡಲು ಅಷ್ಟೊಂದು ಇಷ್ಟ ಇದೆಯಾ?"

"ತುಂಬಾನೇ ಇಷ್ಟ ಇದೆ. ಜೊತೆಗೆ ಚೂಟಿ ಬೇರೆ. ಆದರೆ ಯಾವ ಸ್ಕೂಲಿಗೂ ಸೇರಲು ಆಗುವುದಿಲ್ಲ" ಎಂದು ನಿರ್ಮಲ ಹೇಳಿದಳು.

"ಇವತ್ತೇ ಹುಡುಕಿ ಐದನೇ ತರಗತಿ ಪುಸ್ತಕಗಳನ್ನ ತಂದುಕೊಡ್ತೀನಿ. ನಾಳೇನೆ ಪ್ರಾರಂಭ ಮಾಡಿಬಿಡು" ಎಂದು ಗಂಡ ಹೇಳಿದಾಗ ನಿರ್ಮಲಳ ಮಂದಹಾಸದ ಮುಖಕ್ಕೆ ಕಾಂತಿಯ ಪ್ರಭಾವಳಿ ಮೂಡಿತ್ತು.

"ಹೂಂ. ಹಾಗೆ ಮಾಡ್ತೀನಿ. ಆದರೆ ಸ್ಟೇಟ್ ಸಿಲೆಬಸ್‌ದು ಕನ್ನಡ ಮಾಧ್ಯಮದ ಪುಸ್ತಕಗಳನ್ನು ತನ್ನಿ. ಇಂಗ್ಲಿಷ್ ಮೀಡಿಯಂ ಬೇಡ. ಜೊತೆಗೆ ಬಣ್ಣಬಣ್ಣದ ಚಿತ್ರಗಳು ಇರೋ ಸಣ್ಣಸಣ್ಣ ಕಥೆಗಳ ಇಂಗ್ಲಿಷ್ ಪುಸ್ತಕಗಳನ್ನು ತನ್ನಿ" ಎಂದಳು.

ಮಾರನೆಯ ದಿನ ಬೆಳಗ್ಗೆ ನಿರ್ಮಲ ಬಾಳೆಹಣ್ಣು